ಇಲಾಖೆ / ವಿಷಯ: DEPARTMENT / SUBJECT: ______________________________

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ ದಿನಾಂಕ : DATE : 03/07/2019

# ಶಾಸಕರ ಭವನಕ್ಕೆ ಭಾರೀ ಪೊಲೀಸರ ಬಿಗಿ ಭದ್ರತೆ

## ಶಾಸಕರ ರಾಜೀನಾಮೆ ಬೆನ್ನಲ್ಲೇ ಈ ಕ್ರಮ ಮಾಧ್ಯಮಗಳು, ಜನರಿಗೂ ನೋ ಎಂಟ್ರಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು 3/7/19

ಕಾಂಗ್ರೆಸ್ ಶಾಸಕರಾದ ಆನಂದ್‌ಸಿಂಗ್ ಮತ್ತು ರಮೇಶ್ ಜಾರಕಿಹೊಳಿ ಅವರರಾಜೀನಾಮೆಪ್ರಕರಣದಬೆನ್ನಲ್ಲೇವಿಧಾನಸೌಧಕ್ಕೆಹೊಂದಿಕೊಂಡಿರುವ ಶಾಸಕರ ಭವನಕ್ಕೆ ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದಾರೆ.

ಇತರೆ ಶಾಸಕರು ರಾಜೀನಾಮೆ ನೀಡಬಹುದು ಅಥವಾ ಬೇರೆ ಯಾರಾದರೂ ಶಾಸಕರನ್ನು ಸಂಪರ್ಕ ಮಾಡಿದರೆ ಇನ್ನಷ್ಟು ತೊಂದರೆಯಾಗಬಹುದು ಎಂಬ ಕಾರಣಕ್ಕೆ ಮಾಧ್ಯಮಗಳು ಹಾಗೂ ಸಾರ್ವಜನಿಕರನ್ನು ಶಾಸಕರ ಭವನಕ್ಕೆ ಬಿಡದಂತೆ ಪೊಲೀಸರಿಗೆ ಸರ್ಕಾರದ ಸೂಚನೆ ರವಾನೆಯಾಗಿದೆ ಎಂದು ತಿಳಿದು ಬಂದಿದೆ.

ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ವಿದೇಶ ಪ್ರವಾಸದ ವೇಳೆ ರಾಜ್ಯದಲ್ಲಿ ರಾಜಕೀಯ ಆಟ ಶುರುವಾಗಿದ್ದು, ಸೋಮವಾರ ವಿಜಯನಗರ ಶಾಸಕ ಆನಂದ್‌ಸಿಂಗ್ ಮತ್ತು ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಅಲ್ಲದೆ, ಶಾಸಕರ ಭವನದಲ್ಲಿದ್ದ ವೇಳೆ ತಮ್ಮನ್ನು ಭೇಟಿಯಾದ ಮಾಧ್ಯಮಗಳಿಗೆ ಮಹೇಶ್ ಕುಮಟಳ್ಳಿ ಪ್ರತಿಕ್ರಿಯೆ ನೀಡಿದ್ದರು. ರಾಜಕೀಯ ಪ್ರಹಸನದ ವೇಳೆ ಆಡಳಿತಾರೂಢ ಶಾಸಕರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರೆ ಪಕ್ಷಕ್ಕೆ ಮುಜುಗರ ಆಗಬಹುದು ಎನ್ನುವ ಕಾರಣಕ್ಕೆ ಮುಂಜಾಗ್ರತಾ ಕ್ರಮವಾಗಿ ಶಾಸಕರ ಭವನಕ್ಕೆ ಸಾರ್ವಜನಿಕರು ಮತ್ತು ಮಾಧ್ಯಮಗಳಿಗೆ ನಿರ್ಬಂಧ ವಿಧಿಸಲಾಗಿದೆ. ತಮ್ಮ ಕ್ಷೇತ್ರದ ಶಾಸಕರನ್ನು ಭೇಟಿಯಾಗಲು ಬಂದ ಸಾರ್ವಜನಿಕರ ತಪಾಸಣೆ ಮಾಡಿ ಒಳಗೆ ಬಿಡಲಾಗುತ್ತಿತ್ತು. ಅಲ್ಲದೆ, ಮಾಧ್ಯಮದವರಿಗೆ ಯಾವ ಉದ್ದೇಶಕ್ಕೆ ಭೇಟಿಯಾಗಬೇಕೆಂದು ಹೇಳಿ ಎಂದು ಪೊಲೀಸರು ಕೇಳುತ್ತಿದ್ದುದು ಕಂಡು ಬಂತು.